ಶ್ರೀ ಎಂ. ಪಿ. ಪ್ರಕಾಶ್ (ಬೆಂಗಳೂರು ಅಭಿವೃದ್ಧಿ, ವಾರ್ತಾ ಪ್ರವಾಸೋದ್ಯಮ ಸಚಿವರು).—

ಅ) ಶ್ವೇತ ಪತ್ರದಲ್ಲಿ ಯಾರನ್ನೂ ಅವರ ಹೆಸರಿನಲ್ಲಿ ಆಪಾದಿಸಿರುವುದಿಲ್ಲ.

ಆ) ಶ್ವೇತ ಪತ್ರವು ಪ್ರಾಧಿಕಾರದಲ್ಲಿ ಕಂಡು ಬಂದಿರುವ ಲೋಪದೋಷಗಳನ್ನು ಸರಿಪಡಿಸಿಕೊಂಡು ಸರಿಯಾದ ಮಾರ್ಗದಲ್ಲಿ ಕಾರ್ಯ ನಿರ್ವಹಿಸಲು ಮಾರ್ಗದರ್ಶನ ನೀಡುವ ವಾಸ್ತವಿಕ ವರದಿಯ ರೂಪದಲ್ಲಿರುತ್ತದೆ. ಅದು ತನಿಖಾ ಅಥವಾ ವಿಚಾರಣಾ ವರದಿಯಲ್ಲ ಆದುದರಿಂದ ಆಪಾದನೆ ಹೊರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) 'ಆ'ನಲ್ಲಿ ಉತ್ತರಿಸಿದಂತೆ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

(ಗೊಂದಲ)

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೆ, ಪ್ರಶ್ನೆಗಳನ್ನು ಆಯ್ಕೆ ಮಾಡತಕ್ಕ ಕಾಲದಲ್ಲಿ ಅಂತಿಮ ಪಟ್ಟಿಯಲ್ಲಿ ನನ್ನ ಪ್ರಶ್ನೆ ಇದೆ. ಇದು ಸರಳವಾದ ಪ್ರಶ್ನೆ ಇದಂ ಆಚ್ಚು ಹಾಕಿಲ್ಲ. ಪ್ರಶ್ನೆಗಳನ್ನು ಆಯ್ಕೆ ಮಾಡತಕ್ಕ ಕಾಲದಲ್ಲಿ ಯಾವ ರೀತಿ ಆಯ್ಕೆ ಮಾಡಲಾಗುತ್ತದೆ. ದಯಮಾಡಿ ತಿಳಿಸಬೇಕಂ.

(ಗೊಂದಲ)

ಅಧ್ಯಕ್ಷರಂ.—ತಾವು ಪ್ರತಿನಿತ್ಯ ಇದೇ ರೀತಿ ಮಾಡುವುದು ಸರಿಯಲ್ಲ. ದಯಮಾಡಿ ತಾವು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೆ, ಸಾರ್ವಜನಿಕ ಮಹತ್ವದ ಪ್ರಶ್ನೆಗಳನ್ನು ಕೊಟ್ಟಿರುತ್ತೇವೆ,

(ಗೊಂದಲ)

ಅಧ್ಯಕ್ಷರು.—ಈ ರೀತಿ ಗದ್ದಲ ಮಾಡುವುದಂ ತಮಗೆ ಸರಿಯಲ್ಲ, ದಯಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ದಿನಾಂಕ ೨೫-೧-೧೯೮೮ರಂದು ಸದನವು ಸಭೆ ನಡೆಸದ ಕಾರಣ ಆ ದಿನದ ಚುಕ್ಕೆ ಗುರುತಿನ ಹಾಗೂ ಪ್ರಶ್ನೆಗಳ ಉತ್ತರಗಳನ್ನು ಚುಕ್ಕೆ ಗುರುತಿಲ್ಲದ ಮೂರನೆಯ ಪಟ್ಟಿಯ ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರಂ.—ಪ್ರಶ್ನೋತ್ತರಗಳನ್ನು ಸಭೆಯ ಮುಂದಿಡಲಾಯಿತು.

(ಗೊಂದಲ)

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೆ, ಈ ರೀತಿ ವ್ಯತ್ಯಾಸ ಆಗಬಾರದಂ.

ಅಧ್ಯಕ್ಷರಂ.—ತಾವು ಇನ್ನೊಂದು ದಿವಸ ಹಾಕಿ ಉತ್ತರ ಕೊಡಿಸುತ್ತೇನೆ. ದಯಮಾಡಿ ಈಗ ತಾವು ಕುಳಿತುಕೊಳ್ಳಬೇಕು.